

## ಹೊಸ ಯಮ!

ಕನ್ನಡ ಚಿತ್ರರಂಗದ ಜನಪ್ರಿಯ ನಗೆನಟರಲ್ಲಿ ಒಬ್ಬರಾದ ಚಿಕ್ಕಣ್ಣ ಯಮನ ಪೋಷಾಕಿನಲ್ಲಿ ಕಾಣಿಸಿಕೊಂಡರೆ ಹೇಗಿರುತ್ತದೆ? ಆ ಕಲ್ಪನೆಯೀಗ 'ಬಿಲ್ ಗೇಟ್ಸ್' ಚಿತ್ರದಲ್ಲಿ ಸಾಕಾರಗೊಂಡಿದೆ. ಪೀಚು ದೇಹದ ಚಿಕ್ಕಣ್ಣ, ಯಮನ ರೂಪದಲ್ಲಿ ಗತ್ತಿನಿಂದ ಕಾಣಿಸಿಕೊಂಡಿದ್ದಾರೆ. ಕಳೆದವಾರವಷ್ಟೇ ಚಿಕ್ಕಣ್ಣನ 'ದೊಡ್ಡಣ್ಣ'ನ ಪಾತ್ರದ ಶೂಟಿಂಗ್ ನಡೆದಿದೆ. ಶಿಶಿರ ಶಾಸ್ತ್ರಿ ಅವರು ಚಿತ್ರಗುಪ್ತನ ಪಾತ್ರದಲ್ಲಿ ಯಮನಿಗೆ ಜೋಡಿಯಾಗಿದ್ದಾರೆ.

'ಬಿಲ್ ಗೇಟ್ಸ್' ಚಿಕ್ಕಣ್ಣ ಮುಖ್ಯಪಾತ್ರದಲ್ಲಿ ಇರುವ ಸಿನಿಮಾ. 'ಮೈಕ್ರೊಸಾಫ್ಟ್' ಕುಬೇರ ಬಿಲ್ ಗೇಟ್ಸ್‌ನಂತೆ ತಾವೂ ಎತ್ತರಕ್ಕೇರಬೇಕು ಎನ್ನುವ ಆಸೆಯಿಂದ ಹಳ್ಳಿಯಿಂದ ನಗರಕ್ಕೆ ಬರುವ ಇಬ್ಬರು ಹುಡುಗರ ಕಥೆ ಚಿತ್ರದಲ್ಲಿದೆ. ಶ್ರೀನಿವಾಸ್ ನಿರ್ದೇಶನದ ಈ ಸಿನಿಮಾ, ಹಳ್ಳಿಯಿಂದ ರಾಜಧಾನಿಗೆ ಬರುವ ತರುಣರು ಎದುರಿಸುವ ತವಕತಲ್ಲಣಗಳನ್ನು ಹಾಸ್ಯದ ಚೌಕಟ್ಟಿನಲ್ಲಿ ನಿರೂಪಿಸುವ ಪ್ರಯತ್ನ. ರೋಜಾ ಹಾಗೂ ಅಕ್ಷರಾ ಚಿತ್ರದ ನಾಯಕಿಯರು.

'ವಿಕ್ಟರಿ', 'ಕ್ವಾಟ್ಲೆ ಸತೀಶ' ಚಿತ್ರಗಳಲ್ಲಿ ಸಹಾಯಕರಾಗಿ ಕೆಲಸ ಮಾಡಿದ್ದ ಶ್ರೀನಿವಾಸ್ 'ಬಿಲ್ ಗೇಟ್ಸ್' ಮೂಲಕ ಸ್ವತಂತ್ರ ನಿರ್ದೇಶಕರಾಗಿದ್ದಾರೆ. ಚಿಕ್ಕಣ್ಣನನ್ನು ಪೂರ್ಣ ಪ್ರಮಾಣದ ನಾಯಕನಾಗಿಸುವ ಮೂಲಕ ಚೊಚ್ಚಿಲ ಸಿನಿಮಾವನ್ನು ಗೆಲ್ಲಿಸಿಕೊಳ್ಳುವ ಪ್ರಯತ್ನ ಅವರದು. ಕೋಮಲ್, ಶರಣ್‌ರಂತೆ ಚಿಕ್ಕಣ್ಣ ಕೂಡ ನಾಯಕನಾಗಿ ಗೆಲ್ಲುವ ವಿಶ್ವಾಸ ಅವರದು. ರಾಕೇಶ್ ತಿಲಕ್ ಛಾಯಾಗ್ರಹಣ, ನೊಬಿನ್ ಪಾಲ್ ಸಂಗೀತ ಚಿತ್ರಕ್ಕಿದೆ.

ಬೆಂಗಳೂರು, ಮೈಸೂರು, ಶ್ರೀರಂಗಪಟ್ಟಣಗಳಲ್ಲಿ 'ಬಿಲ್ ಗೇಟ್ಸ್' ಚಿತ್ರೀಕರಣ ನಡೆದಿದೆ.

■ ರಘು






